**ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಕ್ಷೇತ್ರ ನಿರ್ದೇಶಕರ ಕಛೇರಿ,**
**ಭದ್ರಾ ಹುಲಿ ಯೋಜನೆ, ಚಿಕ್ಕಮಗಳೂರು.**

(ಕಛೇರಿ:08262-234904 ಫ್ಯಾಕ್ಸ್:08262-230032 ಇ-ಮೇಲ್:dcfbhadra@yahoo.com)

---

ಸಂಖ್ಯೆ: ಎ5/ಭೂಮಿ/ವಿವ-09/2008-09 ದಿನಾಂಕ:04-11-2019.

**ಇವರಿಗೆ,**

ಕುಲಸಚಿವರು
ಕುವೆಂಪು ವಿಶ್ವ ವಿದ್ಯಾಲಯ,
ಶಂಕರಘಟ್ಟ, ಲಕ್ಕವಳ್ಳಿ.

**ಮಾನ್ಯರೇ,**

**ವಿಷಯ:** ಕುವೆಂಪು ವಿಶ್ವ ವಿದ್ಯಾಲಯಕ್ಕೆ ಗುತ್ತಿಗೆ ಆಧಾರದಲ್ಲಿ ಮಂಜೂರಾಗಿರುವ 230 ಎಕರೆ (93.08 ಹೆಕ್ಟೇರ್) ಜಮೀನಿನ ಗುತ್ತಿಗೆ ಅವಧಿ ನವೀಕರಣ ಕುರಿತು.

**ಉಲ್ಲೇಖ:**
1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಅರಣ್ಯ ಜೀವ ಪರಿಸ್ಥಿತಿ ಮತ್ತು ಪರಿಸರ ಇಲಾಖೆ ಬೆಂಗಳೂರು ರವರ ಪ್ರವಾಸ ದಿನಾಂಕ: 07-08-2019.
2. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಚಿಕ್ಕಮಗಳೂರು ವೃತ್ತ ಚಿಕ್ಕಮಗಳೂರು ರವರ ಪತ್ರ ಸಂಖ್ಯೆ: ಎ10/ಎಲ್ಎನ್‌ಡಿ/ಕುವಿವಿ/ದಿನಪತ್ರಿಕೆ/ಸಿ.ಆರ್-02/2014-15 ದಿನಾಂಕ: 08-08-2019.
3. ಈ ಕಛೇರಿ ಸಮ ಸಂಖ್ಯೆ ಪತ್ರ ದಿನಾಂಕ: 08-08-2019.

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ(3)ರ ಪತ್ರದೆಡೆ ನಿಮ್ಮ ಗಮನ ಸೆಳೆಯುತ್ತಾ ದಿನಾಂಕ: 07-08-2019 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಅರಣ್ಯ ಜೀವ ಪರಿಸ್ಥಿತಿ ಮತ್ತು ಪರಿಸರ ಇಲಾಖೆ ಬೆಂಗಳೂರುರವರು ಪ್ರವಾಸ ಕೈಗೊಂಡ ಸಂದರ್ಭದಲ್ಲಿ ಬೇಡಿಕೆ ಇರುವ ಅರಣ್ಯ ಜಮೀನಿನ ವಿಸ್ತೀರ್ಣವನ್ನು ಕಡಿಮೆ ಮಾಡಿ ಪರಿಷ್ಕೃತ ಪ್ರಸ್ತಾವನೆಯನ್ನು ನಕಾಶೆಯೊಂದಿಗೆ ತಯಾರಿಸಿ ಪರಿಷ್ಕೃತ ಪ್ರಸ್ತಾವನೆಯನ್ನು ಎಫ್.ಸಿ ಆನ್‌ಲೈನ್ ಮೂಲಕ ಸಲ್ಲಿಸುವಂತೆ ತಿಳಿಸಲಾಗಿತ್ತು.

ಅದರಂತೆ ದಿನಾಂಕ:27-08-2019 ರಂದು ನೀವು ಆನ್‌ಲೈನ್‌ನಲ್ಲಿ ಪರಿಷ್ಕೃತ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ 230 ಎಕರೆ ಅರಣ್ಯ ಪ್ರದೇಶದ ಪೈಕಿ ಹುಲಿ ಸಂರಕ್ಷಿತ ಪ್ರದೇಶಕ್ಕೆ ಹೊಂದಿಕೊಂಡಂತೆ ಒಂದು ಅಂಚಿನಲ್ಲಿರುವ 3 ಎಕರೆ ಬ್ಲಾಕ್ ಪ್ರದೇಶವನ್ನು ಹಾಗೂ ಮಧ್ಯ ಭಾಗದಲ್ಲಿ 17 ಎಕರೆ ಪ್ರದೇಶವನ್ನು ಅಂದರೆ ಒಟ್ಟಾರೆ 20 ಎಕರೆ ಪ್ರದೇಶವನ್ನು ಕಡಿತಗೊಳಿಸಿರುವುದು ಕಂಡುಬಂದಿರುತ್ತದೆ. ದಿನಾಂಕ: 04-11-2019 ರಂದು ನಾನು ಸ್ಥಳ ಪರಿಶೀಲನೆ ಮಾಡಿ ನೋಡಲಾಗಿ ಮೇಲ್ಕಂಡ ಎರಡು ಪ್ರತ್ಯೇಕ ಪ್ರದೇಶಗಳಲ್ಲಿ ಮೊದಲನೆಯದಾಗಿ 3 ಎಕರೆ ಪ್ರದೇಶವನ್ನು ಅರಣ್ಯ ಇಲಾಖೆಯಿಂದ ನಿರ್ವಹಣೆ ಮಾಡಬಹುದಾಗಿರುತ್ತದೆ.ಆದರೆ ಮಧ್ಯ ಭಾಗದಲ್ಲಿರುವ ಪ್ರದೇಶವನ್ನು ತಾವು ಇಲಾಖೆಗೆ ಬಿಟ್ಟು ಪ್ರಸ್ತಾವನೆ ಸಲ್ಲಿಸಿರುವುದರಿಂದ ಸದರಿ ಪ್ರದೇಶದಲ್ಲಿ ವನ್ಯ ಪ್ರಾಣಿಗಳ ವಾಸ್ತವ್ಯ ಮತ್ತು ಸಂಚಾರಮಾಡಲು ಸಾದ್ಯವಾಗುವುದಿಲ್ಲ.

ಆದ್ದರಿಂದ ವನ್ಯ ಪ್ರಾಣಿಗಳ ವಾಸ್ತವ್ಯ ಮತ್ತು ಸಂಚಾರದ ಹಿತಾ ದೃಷ್ಟಿಯಿಂದ ಭದ್ರಾ ಹುಲಿ ಸಂರಕ್ಷಿತ ಪ್ರದೇಶಕ್ಕೆ ಹೊಂದಿಕೊಂಡ ಪ್ರದೇಶವನ್ನು ಕಡಿಮೆಗೊಳಿಸಿ ಕುವೆಂಪು ವಿಶ್ವ ವಿದ್ಯಾಲಯಕ್ಕೆ ಅತೀ ಅವಶ್ಯಕವಾಗಿ ಬೇಕಾಗಿರುವ ಅರಣ್ಯ ಪ್ರದೇಶಕ್ಕೆ ಮರು ಪ್ರಸ್ತಾವನೆಯನ್ನು ಆನ್‌ಲೈನ್‌ನಲ್ಲಿ ಸಲ್ಲಿಸುವಂತೆ ತಿಳಿಸಿದೆ.

ನಿಮ್ಮ ವಿಶ್ವಾಸಿ,

ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಕ್ಷೇತ್ರ ನಿರ್ದೇಶಕರು,
ಭದ್ರಾ ಹುಲಿ ಯೋಜನೆ, ಚಿಕ್ಕಮಗಳೂರು.